ಖಾಸಗಿ ಕಾಲೇಜುಗಳು

೫.	ಸೆಂಟ್ ಜಾನ್ಸ್ ವೈದ್ಯಕೀಯ ಮಹಾ ವಿದ್ಯಾಲಯ, ಬೆಂಗಳೂರು	೬೦
೬.	ಎಂ.ಎಸ್. ರಾಮಯ್ಯ ವೈದ್ಯಕೀಯ ಮಹಾ ವಿದ್ಯಾಲಯ, ಬೆಂಗಳೂರು-ಬಿಳಿ	೧೪೦
೭.	ಅಂಬೇಡ್ಕರ್ ವೈದ್ಯಕೀಯ ಮಹಾ ವಿದ್ಯಾಲಯ, ಬೆಂಗಳೂರು-ಜೆ	೧೫೦
೮.	ಕೆಂಪೇಗೌಡ ವೈದ್ಯಕೀಯ ಮಹಾ ವಿದ್ಯಾಲಯ, ಬೆಂಗಳೂರು-೪	೧೫೦
೯.	ಜೆ.ಜೆ.ಎಂ. ವೈದ್ಯಕೀಯ ಮಹಾ ವಿದ್ಯಾಲಯ, ದಾವಣಗೆರೆ	೨೨೦
೧೦.	ಜೆ.ಎನ್. ವೈದ್ಯಕೀಯ ಮಹಾ ವಿದ್ಯಾಲಯ, ಬೆಳಗಾಂ	೧೫೫
೧೧.	ಎಂ.ಆರ್. ವೈದ್ಯಕೀಯ ಮಹಾ ವಿದ್ಯಾಲಯ, ಗುಲ್ಬರ್ಗ	೧೪೦
೧೨.	ಕೆ.ಎಂ.ಸಿ. ವೈದ್ಯಕೀಯ ಮಹಾ ವಿದ್ಯಾಲಯ, ಮಣಿಪಾಲ : ಮಂಗಳೂರು	೨೯೦
೧೩.	ಆದಿಚುಂಚನಗಿರಿ ವೈದ್ಯಕೀಯ ವಿಜ್ಞಾನ ಸಂಸ್ಥೆ, ನಾಗಮಂಗಲ, ಮಂಡ್ಯ ಜಿಲ್ಲೆ	೧೫೦
೧೪.	ಆಲ್ ಅಮೀನ್ ವೈದ್ಯಕೀಯ ಮಹಾ ವಿದ್ಯಾಲಯ, ಬಿಜಾಪುರ	೧೨೦
೧೫.	ಜೆ.ಎಸ್.ಎಸ್. ವೈದ್ಯಕೀಯ ಮಹಾವಿದ್ಯಾಲಯ, ಮೈಸೂರು	೧೫೦
೧೬.	ಶ್ರೀ ದೇವರಾಜ್ ಅರಸ್ ಟ್ರಸ್ಟ್ ವೈದ್ಯಕೀಯ ಮಹಾ ವಿದ್ಯಾಲಯ, ಕೋಲಾರ	೧೩೦
೧೭.	ಬಿ.ಎಲ್.ಡಿ.ಇ. ವೈದ್ಯಕೀಯ ಮಹಾ ವಿದ್ಯಾಲಯ, ವಿಜಾಪುರ	೧೩೦
	ಒಟ್ಟು	೨೫೫೦

ಆ) ಸರ್ಕಾರದವರ ಶಿಫಾರಸ್ಸಿನ ಮೇಲೆ ಪ್ರವೇಶ ಪಡೆಯಲು ಸೀಟುಗಳಿರುವುದಿಲ್ಲ.

ಇ) ಸಂಬಂಧಿಸಿದ ವಿಶ್ವವಿದ್ಯಾನಿಲಯದ ತನಿಖಾ ಆಯೋಗ ಸ್ಥಳ ಪರೀಕ್ಷೆ ನಂತರ ನೂನ್ಯತೆ ಮತ್ತು ಕೊರತೆಗಳನ್ನು ತಿಳಿಸಿದ ನಂತರ ಸಂಬಂಧಿಸಿದ ಕಾಲೇಜುಗಳು ಅವುಗಳನ್ನು ಪೂರೈಕೆ ಮಾಡ ಬೇಕಾಗುತ್ತೆ. ಭಾರತೀಯ ವೈದ್ಯ ಪರಿಷತ್ತು ನಿಗದಿಪಡಿಸಿರುವಂತೆ ಅಗತ್ಯ ಸೌಲಭ್ಯಗಳನ್ನು ಪೂರೈಕೆ ಮಾಡಿ ವರದಿ ಮಾಡಲು ಕಾಲೇಜುಗಳಿಗೆ ತಿಳಿಸಲಾಗಿದೆ. ಹಾಗೆ ಮಾಡದಿದ್ದಲ್ಲಿ ಮುಂದಿನ ಕ್ರಮ ಪರಿಶೀಲಿಸಲಾಗುವುದು.

ಮೈಸೂರು ನಗರದಲ್ಲಿ ಕಟ್ಟುತ್ತಿರುವ ಕ್ರೀಡಾಂಗಣದ ಬಗ್ಗೆ

೫೦ (೩೨) ಶ್ರೀ ವೇದಾಂತ ಪಿಮ್ಮಿಗೆ (ಕೃಷ್ಣರಾಜ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧. ಮೈಸೂರು ನಗರದಲ್ಲಿ ಕಟ್ಟಲಾಗುತ್ತಿರುವ ಕ್ರೀಡಾಂಗಣಕ್ಕೆ ಸರ್ಕಾರವು ಇದುವರೆವಿಗೂ ಖರ್ಚು ಮಾಡಿರುವ ಹಣವೆಷ್ಟು ?

೨. ಇದಕ್ಕಾಗಿ ಸಾರ್ವಜನಿಕರಿಂದ ಎಂತಹ ರೂಪದಲ್ಲಿ ಬಂದಿರುವ ಹಣವೆಷ್ಟು ?

೩. ಕ್ರೀಡಾಂಗಣದ ಕೆಲಸವು ಯಾವ ಹಂತದಲ್ಲಿದೆ ? ಈಗ ಪೂರ್ಣವಾಗಲು ಇನ್ನೂ ಎಷ್ಟು ಕಾಲ ಬೇಕು ಹಾಗೂ ಅದಕ್ಕೆ ಆಗತ್ಯವಿರುವ ಹಣವೆಷ್ಟು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಯವರು).—

೧. ರೂ. ೧೮,೦೫,೦೦೦-೦೦

೨. ರೂ. ೧೭,೦೧,೦೦೦-೦೦

೩. ಆಥ್ಲೆಟಿಕ್ ಮೈದಾನ ಹಾಗೂ ಗ್ಯಾಲರಿ, ಕ್ರೀಡಾ ಸಮುಚ್ಚಯದ ಬಂಡ್‌ಗೆ ಸಂಬಂಧಿಸಿದ ಮಣ್ಣಿನ ಕೆಲಸ, ಆಥ್ಲೆಟಿಕ್ ಮೈದಾನದಲ್ಲಿನ ಸೈಜುಕಲ್ಲಿನ ಪ್ಯಾಸನರಿ ಗೋಡೆಗಳ ಕೆಲಸ ಭಾಗಶಃ ಪೂರ್ಣಗೊಂಡಿದೆ. ಉಳಿದ ಕ್ಷೇತ್ರದ ಕಛೇರಿಯ ನಿರ್ಮಾಣ, ಪವರ್‌ಹೌಸ್ ನಿರ್ಮಾಣ ಬ್ಯಾಸ್ಕೆಟ್‌ಬಾಲ್

ಕೋರ್ಟ್‌ಗಳು-೨, ಎರಡು ವಾಲಿಬಾಲ್ ಕೋರ್ಟ್‌ಗಳು ಕೊಳವೆ ಬಾವಿ ತೋಡುವಿಕೆ, ಡೀಪ್‌ವೆಲ್ ಪಂಪ್, ಡಿಸ್ಟ್ರಿಬ್ಯೂಷನ್ ಪೈಪ್ ಲೈನ್ ಇತರೆ ಕೆಲಸಗಳು ಮುಗಿದಿವೆ.

ಇನ್ನೂ ಬಾಕಿ ಉಳಿದಿರುವ ಕೆಲಸಗಳಿಗೆ ೧೭.೦೦ ಲಕ್ಷ ರೂ. ಗಳು ಬೇಕಾಗಿದ್ದು ಆ ಕೆಲಸ ಪೂರ್ಣಗೊಳ್ಳಬೇಕಾದರೆ ಇನ್ನೂ ಸಮಯ ಬೇಕಾಗುತ್ತದೆ. ಆದರೂ ಅತಿ ಜರೂರಾಗಿ ಕೆಲಸ ಮುಗಿಸಲು ಎಲ್ಲ ಪ್ರಯತ್ನಗಳನ್ನು ಮಾಡಲಾಗುವುದು.

ರಾಜಕೀಯ ಸಂತ್ರಸ್ತರಿಗೆ ರಾಜ್ಯ ಗೌರವಧನ ಮಂಜೂರಾತಿ ಬಗ್ಗೆ

೫೧ (೩೧) ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ?

ಅ) ರಾಜ್ಯ ಸರ್ಕಾರದವರು ರಾಜ್ಯದಲ್ಲಿ ಎಷ್ಟು ಮಂದಿಗೆ ರಾಜಕೀಯ ಪಾಶಾಸನ ನೀಡುತ್ತಿದ್ದಾರೆ ಹಾಗೂ ಪ್ರತಿ ತಿಂಗಳಿಗೆ ಪ್ರತಿ ಪ್ಯಕ್ಕಿಗೆ ನೀಡುತ್ತಿರುವ ಹಣವೆಷ್ಟು?

ಆ) ಈ ರಾಜಕೀಯ ಪಾಶಾಸನ ಮಂಜೂರ್ಮಾಡುವಲ್ಲಿ ಅನುಸರಿಸುತ್ತಿರುವ ನೀತಿ, ಹಾಗೂ ವಿಧಾನಗಳೇನು?

ಇ) ಕೇಂದ್ರ ಸರ್ಕಾರದವರು ಹಾಗೂ ರಾಜ್ಯ ಸರ್ಕಾರದವರು ರಾಜಕೀಯ ಪಾಶಾಸನ ಕೊಡುತ್ತಿರುವುದರಲ್ಲಿ ಇರುವ ವ್ಯತ್ಯಾಸಕ್ಕೆ ಕಾರಣವೇನು?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಯವರು).—

ಅ) ರಾಜ್ಯದಲ್ಲಿ ಒಟ್ಟು ೨೧,೫೮೩ ಜನ ಸ್ವಾತಂತ್ರ್ಯ ಯೋಧರು ಪಾಶಾಸನ (ರಾಜ್ಯ ಗೌರವಧನ) ಪಡೆಯುತ್ತಿದ್ದಾರೆ. ಪ್ರತಿ ತಿಂಗಳಿಗೆ ಪ್ರತಿ ಸ್ವಾತಂತ್ರ್ಯ ಯೋಧರಿಗೆ ಅಥವಾ ಸ್ವಾತಂತ್ರ್ಯ ವಿಧವೆಯರಿಗೆ, ಅಥವಾ ಅಪ್ರಾಪ್ತ ವಯಸ್ಕ-ಸ್ವಾತಂತ್ರ್ಯ ಯೋಧರ ಮಕ್ಕಳಿಗೆ ರೂ. ೧೫೦-೦೦ ರಂತೆ ಪಾಶಾಸನವನ್ನು ನೀಡಲಾಗುತ್ತಿದೆ.

ಆ) ಭಾರತ ಸ್ವಾತಂತ್ರ್ಯ ಸಂಗ್ರಾಮದ ನಿಮಿತ್ತ ತುರುಂಗವಾಸ ಅನುಭವಿಸಿದವರು ಹಾಗೂ ಭೂಗತ ಕಾರ್ಯ ನಿರ್ವಹಿಸಿದವರನ್ನು ಸ್ವಾತಂತ್ರ್ಯ ಯೋಧರೆಂದು ಪರಿಗಣಿಸಿ ಅಂತಹವರು ಮಾತ್ರ ಪಾಶಾಸನಕ್ಕೆ (ರಾಜ್ಯ ಗೌರವಧನ) ಅರ್ಹರಾಗಿರುತ್ತಾರೆ.

ಇ) ಕೇಂದ್ರ ಗೌರವಧನ ಮಂಜೂರಾತಿಯ ನಿಯಮಗಳ ಪ್ರಕಾರ ಸ್ವಾತಂತ್ರ್ಯ ಸಂಗ್ರಾಮದ ನಿಮಿತ್ತ ೬ ತಿಂಗಳ ಕಾರಾಗೃಹ ವಾಸ. ಭೂಗತ ಕಾರ್ಯವೆಸಗಿರುವ ಸ್ವಾತಂತ್ರ್ಯ ಯೋಧರುಗಳು ಕೇಂದ್ರ ಸರ್ಕಾರದ ತೀರ್ಮಾನದಂತೆ ತಿಂಗಳಿಗೆ ರೂ. ೫೦೦-೦೦ ಕೇಂದ್ರ ಗೌರವಧನಕ್ಕೆ ಅರ್ಹರಾಗಿರುತ್ತಾರೆ. ಆದರೆ ರಾಜ್ಯ ಗೌರವಧನ ಮಂಜೂರಾತಿ ನಿಯಮದ ಪ್ರಕಾರ ಸ್ವಾತಂತ್ರ್ಯ ಸಂಗ್ರಾಮದ ಸಮಯದಲ್ಲಿ ಕನಿಷ್ಟಪಕ್ಷ ಒಂದು ದಿನ ಕಾರಾಗೃಹ ಶಿಕ್ಷೆ ಅನುಭವಿಸಿದ ಸ್ವಾತಂತ್ರ್ಯ ಯೋಧರುಗಳು ರಾಜ್ಯ ಸರ್ಕಾರದ ತೀರ್ಮಾನದಂತೆ ತಿಂಗಳಿಗೆ ರೂ. ೧೫೦-೦೦ ರ ರಾಜ್ಯ ಗೌರವಧನಕ್ಕೆ ಅರ್ಹರಾಗಿರುತ್ತಾರೆ.

ಸಾಂಸ್ಕೃತಿಕ ಚಟುವಟಿಕೆಗಳಲ್ಲಿರುವವರಿಗೆ ಪಾಶಾಸನ ನೀಡುವ ಬಗ್ಗೆ

೫೨ (೩೦) ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ?

ಅ) ರಾಜ್ಯ ಸರ್ಕಾರದವರು ರಾಜ್ಯದಲ್ಲಿ ಸಾಹಿತ್ಯ, ಸಂಗೀತ, ನಾಟಕ, ನೃತ್ಯ ಜಾನಪದ ಹಾಗೂ ಚಿತ್ರಕಲೆ ಈ ಕ್ಷೇತ್ರಗಳಲ್ಲಿ ದುಡಿದವರಿಗೆ ನೀಡುತ್ತಿರುವ ಪಾಶಾಸನವೆಷ್ಟು?

ಆ) ಈ ಪಾಶಾಸನ ನೀಡುವುದಕ್ಕೆ ಸರ್ಕಾರದವರು ಅನುಸರಿಸುತ್ತಿರುವ ನೀತಿ ಹಾಗೂ ನಿಯಮಗಳೇನು?

ಇ) ಈ ಕ್ಷೇತ್ರಗಳಲ್ಲಿ ಅನೇಕ ಹರ್ಷಗಳು ದುಡಿದು ತ್ಯಾಗ ಮಾಡಿರುವ ಅನೇಕ ಜನರಿಗೆ ಪಾಶಾಸನ ಸಿಕ್ಕದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?